ಸಲ್ಲದು ಎಂಬ ಬಗ್ಗೆ. ಹಾಗಾದಾಗ ರಸಿಕರು ಈ ನೃತ್ಯಪ್ರಕಾರದ ಬಗ್ಗೆಯೇ ಉಪೇಕ್ಷೆ ತಳೆಯಬಹುದು.

◆ **ವಿದ್ಯಾರ್ಥಿ ಎಂಬ ಪದದ ವ್ಯಾಖ್ಯೆ ಇತ್ತೀಚೆಗೆ ಬದಲಾಗಿದೆ. ಶಾಲೆ ಕಾಲೇಜುಗಳಲ್ಲಿ 'ವಿದ್ಯಾರ್ಥಿ' ಎನಿಸಿಕೊಳ್ಳುವುದಕ್ಕೂ, ಕಲಾಪ್ರಕಾರವನ್ನು ಕಲಿಯುವಾಗ 'ವಿದ್ಯಾರ್ಥಿ' ಎನಿಸಿಕೊಳ್ಳುವುದಕ್ಕೂ ಬಹಳ ವ್ಯತ್ಯಾಸವಿದೆ. ನಿಮ್ಮ ಅಭಿಮತವೇನು ?**

ಡಿಜಿಟಲ್ ಯುಗದ ವಿದ್ಯಾರ್ಥಿಗಳು ಸ್ವಲ್ಪ ಮೃದುವಾಗಿರುತ್ತಾರೆ. ಕಲಿಕೆಯ ದೃಷ್ಟಿಕೋನದಿಂದ ನೋಡಿದರೆ, ಒಬ್ಬ ವಿದ್ಯಾರ್ಥಿ ಹೇಗಿರಬೇಕು ಎಂದು ಕೆಲವು ವಿಷಯ ಹೇಳಬಹುದು. ಇತ್ತೀಚೆಗೆ 'ಎಲ್ಲವನ್ನೂ ಪ್ರಶ್ನಿಸಿ' ಎಂದು ಹೊಸತಲೆಮಾರಿನವರನ್ನು ಪ್ರೋತ್ಸಾಹಿಸಲಾಗುತ್ತದೆ. ಆದರೆ ಪ್ರಶ್ನೆಗಳು ಸರಿಯಾದ ದಿಕ್ಕಿನಲ್ಲಿರಬೇಕು ಎಂಬ ತಿಳಿವನ್ನೂ ಅವರಿಗೆ ನೀಡಬೇಕು. ಹೊಸವಿಷಯವನ್ನು ಕಲಿಯುವಾಗ ವಿದ್ಯಾರ್ಥಿಗಳಲ್ಲಿ ಸ್ವೀಕಾರ ಮನೋಭೂಮಿಕೆ ಇರಬೇಕು ಅಲ್ಲವೇ. ನೃತ್ಯಶಾಲೆಯಲ್ಲಿ ಹೊಸ ಹೊಸ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳಿಗೆ ಹೇಳಿಕೊಡಬೇಕಾಗುತ್ತದೆ. ಉದಾಹರಣೆಗೆ ಜಯದೇವನ 'ಅಷ್ಟಪದಿ'ಯನ್ನು ಪಾಠಮಾಡಲು ಆರಂಭಿಸುವ ಮುನ್ನ ಕೆಲವು ಓದು, ಕಲಿಕೆಯ ಅಗತ್ಯವಿರುತ್ತದೆ. ವಿದ್ಯಾರ್ಥಿಯು ಅಷ್ಟಪದಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ರಾಧೆಯ ಮನಸ್ಥಿತಿಯನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಹಾಗಾಗಿ, ಅಷ್ಟಪದಿ ಪಾಠಕ್ಕೆ ಪೂರ್ವಭಾವಿ ಎಂಬಂತೆ, 'ನೀವು ಇಂತಹ ಪ್ರದರ್ಶನವನ್ನು ನೋಡಿಬನ್ನಿ' ಎಂದು ಹೇಳುವಾಗ, ವಿದ್ಯಾರ್ಥಿಗಳು, 'ನೀವೇಕೆ ನನಗೆ ಬೇರೆ ಪ್ರದರ್ಶನಗಳನ್ನು ನೋಡುವ ಅಸೈನ್‌ಮೆಂಟ್ ಹಾಕುವಿರಿ?' ಎಂದು ಪ್ರಶ್ನಿಸಿದರೆ, ಅದಕ್ಕೆ ಉತ್ತರಿಸುವುದು ಕಷ್ಟ. ಸರಿಯಾದ ಪ್ರಶ್ನೆ ಕೇಳುವ ವಿದ್ಯಾರ್ಥಿಗಳಿದ್ದರೆ ಗುರುಗಳಿಗೂ ಕಲಿಸುವುದಕ್ಕೆ ಸಂತೋಷವಾಗುತ್ತದೆ. ಹಾಗೆಂದು, ಪ್ರಶ್ನಿಸುವುದನ್ನೇ ಉದ್ದೇಶವನ್ನಾಗಿ ಇರಿಸಿಕೊಂಡರೆ, ಜ್ಞಾನವನ್ನು ಸ್ವೀಕರಿಸುವುದು ಅವರಿಗೆ ಸಾಧ್ಯವಾಗುವುದಿಲ್ಲ. ಕಲೆಯ ಕಡೆಗೆ ಸಣ್ಣ ಪ್ರಮಾಣದ ಶರಣಾಗತಿ, ಸಮರ್ಪಣಾ ಮನೋಭಾವ ಇರಲೇಬೇಕೆನಿಸುತ್ತದೆ. ಆಗ



ಶ್ರಮಪಟ್ಟು ಅಭ್ಯಾಸ ಮಾಡುವ ಶಕ್ತಿಯು ವಿದ್ಯಾರ್ಥಿಗೆ ದೊರೆಯುತ್ತದೆ. ಜೀವನ ಶಿಸ್ತು, ಉತ್ತರದಾಯಿತ್ವ ಮುಂತಾದ ಗುಣಗಳು ವಿದ್ಯಾರ್ಥಿಗಳಿಗೆ ಸೀಮಿತ ವಾದ್ದಲ್ಲ. ಅದು ಮನುಷ್ಯರಾಗುವ ಹಾದಿಯಲ್ಲಿ ಎಲ್ಲರೂ ಸ್ವಯಂ ಅಳವಡಿಸಿಕೊಳ್ಳಬೇಕಾದ ನಿಯಮಗಳು.

ಈಗಿನ ವಿದ್ಯಾರ್ಥಿಗಳು ಬಹಳ ಚುರುಕುಮತಿ ಯವರು. ಪ್ರತಿಭಾವಂತರು. ಹಿಂದಿನಕಾಲಕ್ಕೆ ಹೋಲಿಸಿದರೆ ಇಂದಿನ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಸಂಪನ್ಮೂಲದ ಬೆಂಬಲವೂ ಇರುತ್ತದೆ. ಆದರೆ ಅವರಲ್ಲಿ ಸ್ವೀಕಾರ ಭೂಮಿಕೆಯನ್ನು ಸಿದ್ಧಮಾಡುವುದು ಸವಾಲಿನ ಕೆಲಸ. ಕೇವಲ ಪ್ರತಿಭೆಯಿದ್ದರೆ ಸಾಲದು. ಅಥವಾ ಕೇವಲ ಶ್ರಮವಷ್ಟೇ ಸಾಲದು. ತನ್ನಲ್ಲಿ ಯಾವುದರ ಕೊರತೆಯಿದೆ, ಅದನ್ನು ಹೇಗೆ ಭರ್ತಿ ಮಾಡಿಕೊಂಡು ಜ್ಞಾನದ ಮೆಟ್ಟಿಲೇರಬಲ್ಲೆ ಎಂಬ ಹುಡುಕಾಟ, ಆಸಕ್ತಿ, ಕುತೂಹಲದ ಮನಸ್ಥಿತಿಯನ್ನು ಅವರಲ್ಲಿ ಕಾಪಿಡುವುದು ಕಷ್ಟವೆನಿಸುತ್ತದೆ. ವಿದ್ಯಾರ್ಥಿಗಳು, ಉದಯೋನ್ಮುಖ ಕಲಾವಿದರು ಟೀಕೆ, ವಿಮರ್ಶೆಗಳನ್ನು ಸ್ವೀಕರಿಸಲು ಸಿದ್ಧರಿರಬೇಕು ಎಂದು ನಾನು ಯಾವಾಗಲೂ ಹೇಳುತ್ತಿರುತ್ತೇನೆ.

●